Reg. No. | | | | | | | | | |

# BBAKAL 231

## III Semester B.B.A. Degree Examination, April 2021
## (Choice Based Credit System)
## (2020 – 21 Batch Onwards)
## Kannada Language
## KANNADA

Time : 3 Hours Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ತಪ್ಪು ಮಾಡದೆಯೂ ಕಷ್ಟವನ್ನು, ಹಿಂಸೆಯನ್ನು ಅನುಭವಿಸುವ ಚಂದ್ರಮತಿಯ ವ್ಯಕ್ತಿತ್ವದ ಔನ್ನತ್ಯವನ್ನು ರಾಘವಾಂಕನ ಕಾವ್ಯದ ಹಿನ್ನೆಲೆಯಿಂದ ಚರ್ಚಿಸಿರಿ.

ಅಥವಾ

'ವ್ಯಕ್ತಿಗತ ಅರಿವು, ಆತ್ಮವಿಮರ್ಶೆಗಳು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುವುದು ಮಾತ್ರವಲ್ಲ ಸಮಾಜದ ಸುಧಾರಣೆಯಲ್ಲೂ ಪಾತ್ರವಹಿಸುತ್ತದೆ' – ಈ ಮಾತುಗಳನ್ನು ಬಸವಣ್ಣನವರ ವಚನಗಳು ವಿವರಿಸುವ ಬಗೆ ಹೇಗೆ ? ವಿಶ್ಲೇಷಿಸಿರಿ.

2) ತುಳುನಾಡಿನ ಧರ್ಮ ಮತ್ತು ಸಮನ್ವಯತೆಯ ಸ್ವರೂಪ ಹಾಗೂ ಅದರ ಮಹತ್ವವನ್ನು 'ಸಾಂಸ್ಕೃತಿಕ ತುಳುನಾಡು' ಹೇಗೆ ವಿವರಿಸುತ್ತದೆ ? ವಿಶ್ಲೇಷಿಸಿರಿ.

ಅಥವಾ

ವೈಯಕ್ತಿಕ ಬದುಕು ಹಾಗೂ ಕಲಾತ್ಮಕ ಬದುಕುಗಳ ನಡುವಿನ ಸಂಬಂಧ ಹಾಗೂ ವೈರುಧ್ಯಗಳು 'ಮಾಟ' ಕಥೆಯಲ್ಲಿ ವ್ಯಕ್ತವಾಗಿರುವ ಬಗೆ ಹೇಗೆ ? ವಿವರಿಸಿರಿ.

3) ನಾಲೆಯ ನಿರ್ಮಾಣ ಕಾರ್ಯದುದ್ದಕ್ಕೂ ಕಾರ್ಮಿಕರು ಎದುರಿಸಿದ ಸಮಸ್ಯೆಗಳನ್ನು 'ತಿರುಗೋಡಿನ ರೈತ ಮಕ್ಕಳು' ಕಾದಂಬರಿಯ ಹಿನ್ನೆಲೆಯಲ್ಲಿ ವಿಮರ್ಶಿಸಿರಿ.

ಅಥವಾ

ಜಮೀನ್ದಾರರ ಶೋಷಣೆ–ದಬ್ಬಾಳಿಕೆಗಳು ನಾ. ಡಿಸೋಜರವರ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಬಗೆಯನ್ನು ವಿಶ್ಲೇಷಿಸಿರಿ.

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) ಮೂಲಭೂತ ಸೌಕರ್ಯಗಳ ಕೊರತೆ ಉಂಟು ಮಾಡಬಹುದಾದ ಅಸಮತೋಲನಗಳನ್ನು ಎಂ. ಗೋಪಾಲಕೃಷ್ಣ ಅಡಿಗರ 'ಇದು ಮೊದಲು' ಕವನ ಹೇಗೆ ವಿವರಿಸುತ್ತದೆ ? ವಿವೇಚಿಸಿರಿ.

**ಅಥವಾ**

ಹೆಣ್ಣೊಬ್ಬಳ ತವರಿನ ಕಾಳಜಿ, ತವರಿನ ಬಗೆಗಿನ ಹಾರೈಕೆಗಳು 'ಜನಪದ ಗೀತೆ' ಗಳಲ್ಲಿ ವ್ಯಕ್ತವಾದ ಬಗೆ ಹೇಗೆ ವಿವರಿಸಿರಿ.

2) ಮನುಷ್ಯನ ಅರ್ಥಪೂರ್ಣ ಬದುಕಿಗೆ ಸಾಮಾಜಿಕ ಮೌಲ್ಯಗಳು ಹೇಗೆ ಮುಖ್ಯವೋ, ಧಾರ್ಮಿಕ ನಂಬಿಕೆಗಳೂ ಅಷ್ಟೇ ಮುಖ್ಯ. 'ಕೊಡವರ ಧಾರ್ಮಿಕ ನಂಬಿಕೆಗಳು' ಲೇಖನದಲ್ಲಿ ಇದು ಹೇಗೆ ವ್ಯಕ್ತವಾಗಿದೆ ? ವಿವೇಚಿಸಿರಿ.

**ಅಥವಾ**

'ಊರನ್ನು ಇನ್ನಾರೋ ಕೊಳ್ಳೆ ಹೊಡೆಯುವ ಮುನ್ನ ಅದಕ್ಕೆ ಅಗುಳಿ ಹಾಕಬೇಕಲ್ಲದೆ, ಕೊಳ್ಳೆ ಹೊಡೆದ ಮೇಲೆ ಅಗುಳಿ ಹಾಕಿ ಪ್ರಯೋಜನವಿಲ್ಲ' – ಎನ್ನುವ ಕೆ.ಟಿ.ಗಟ್ಟಿಯವರ ಮಾತು ನೀರಿನ ಮಹತ್ವವನ್ನು ಹೇಗೆ ವಿವರಿಸಿದೆ ? ವಿಶ್ಲೇಷಿಸಿ.

3) ಮೇಸ್ತ್ರಿ ದುರ್ಗೋಜಿಯ ನಯವಂಚಕತನವನ್ನು 'ತಿರುಗೋಡಿನ ರೈತ ಮಕ್ಕಳು' ಕಾದಂಬರಿ ಹೇಗೆ ಚಿತ್ರಿಸುತ್ತದೆ ? ವಿವರಿಸಿರಿ.

**ಅಥವಾ**

ನಾ. ಡಿಸೋಜರ ಕಾದಂಬರಿಯಲ್ಲಿ ಚಿತ್ರಿತವಾದ ಸ್ತ್ರೀಶೋಷಣೆಯ ಸ್ವರೂಪವನ್ನು ವಿವೇಚಿಸಿರಿ.

III. ಈ ಕೆಳಗಿನವುಗಳಲ್ಲಿ ಒಂದರ ಸಂದರ್ಭ ಸೂಚಿಸಿ ಭಾವಾರ್ಥವನ್ನು ವಿವರಿಸಿರಿ. **(1×5=5)**

1) ಬಂದರಂ ಲೋಹಿತಾಶ್ವಾ ಎಂದು ಬಟ್ಟೆಯೊಳು
ನಿಂದರಂ ಲೋಹಿತಾಶ್ವಾ ಎಂದು ಗಾಳಿ ಗಿಟೆ
ಕೆಂದಡಂ ಲೋಹಿತಾಶ್ವಾ ಎಂದು ಕರೆಕರೆದು ಬಿಡೆ ಬೀದಿಗಳುವಿನಂತೆ
ಮಂದಮತಿಯಾಗಿರ್ದ ಚಂದ್ರಮತಿಗೊಬ್ಬನೈ
ತಂದಿಂದು ಕೂಡೆ ಹೋಗಿರ್ದು ಕಂಡೆಂ ನಿನ್ನ
ಕಂದನೊಂದುಗ್ರಫಣಿ ತಿಂದು ಜೀವಗಳೆದನೆಂದು ಹೇಳಿದನಾಗಳು

**ಅಥವಾ**

2) ಕಪಟತನದಲಿ ಕಾಡುವರೆಲ್ಲರು
ಜಪಗಳ ಮಾಡಿದರೇನು ಫಲ
ಕುಪಿತ ಬುದ್ಧಿಯನು ಬಿಡದೆ ನಿರಂತರ
ಉಪವಾಸ ಮಾಡಿದರೇನು ಫಲ

IV. ಯಾವುದಾದರೂ **ಎರಡು** ಸಾಲುಗಳನ್ನು ಸಂದರ್ಭ ಸ್ವಾರಸ್ಯದೊಂದಿಗೆ ವಿವರಿಸಿರಿ. **(2×4=8)**

1) ಒಡೆದು ಬೀಳಲಿ ಮೊದಲು ಕೋಟೆಯೆಲ್ಲ.

2) ಹಾವಿಗೆ ಹಾಲೆರೆದರೇನು ಫಲ.

3) ನರಿಗಳೆಳೆಯದ ಮುನ್ನ ದಹಿಸಬೇಡವೆ ತಂದೆ.

4) ಕೊಟ್ಟ ಗಂಡನ ಮನಿ ಶ್ರೇಷ್ಠ ಹೆಣ್ಣಿಗೆ.

V. ಅ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ತಾಳ್ತಜೆ ವಸಂತ ಕುಮಾರ್
2) ಪಾಡ್ದನ
3) ಕಾಪರ್ನಿಕಸ್
4) ಮಾಟ.

ಆ) ಯಾವುದಾದರೂ **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×4=8)**

1) ಕೆಂಪಿ
2) ನಾ. ಡಿಸೋಜ
3) ತಿರುಗೋಡಿನ ರೈತ ಮಕ್ಕಳು
4) ನಂಬೂದಿರಿ.

VI. **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) ಹರಿಹರನ ಸೋದರಳಿಯ ಹಾಗೂ ಶಿಷ್ಯ ಯಾರು ?
2) ಬಸವಣ್ಣ ಯಾರ ಆಸ್ಥಾನದಲ್ಲಿ ಕರಣಿಕನಾಗಿದ್ದರು ?
3) ಪುರಂದರದಾಸರ ಗುರುಗಳ ಹೆಸರೇನು ?
4) 'ಅಶ್ವತ್ಥಾಮನ್' ಯಾರ ಕೃತಿ ?
5) ಗೋಪಾಲಕೃಷ್ಣ ಅಡಿಗರು ಹುಟ್ಟಿದ ಸ್ಥಳ ಯಾವುದು ?
6) ತ್ಯಾಂಪನ ಹೆಂಡತಿಯ ಹೆಸರೇನು ?
7) ಫಿನ್‌ಲ್ಯಾಂಡ್ ದೇಶದ ಜನಪದ ಕಾವ್ಯ ಯಾವುದು ?
8) ಬಿ.ಡಿ. ಗಣಪತಿ ಹೆಸರಿನ ಪೂರ್ಣರೂಪವನ್ನು ವಿಸ್ತರಿಸಿ ಬರೆ.
9) 'ಪಿಂಗಾರ' ಇದು ಯಾರ ಪ್ರಕಟಿತ ಕೃತಿ ?
10) 'ಭೂಮಿ ಗುಂಡಗಿದೆ' ಎಂದು ಹೇಳಿದವರಾರು ?
11) ನಾಲೆಯ ಕಾಮಗಾರಿಕೆಯನ್ನು ಯಾವ ಕಂಪನಿಗೆ ವಹಿಸಿಕೊಡಲಾಯಿತು ?
12) 'ಕಾಡಿನ ಬೆಂಕಿ' ಚಲನಚಿತ್ರ ಯಾವ ಪ್ರಶಸ್ತಿಯನ್ನು ಪಡೆದಿದೆ ?

---